

# ಕ್ರಿಕೆಟರ್ ಆಗಲಿಲ್ಲ, ನಿರ್ದೇಶಕನೂ...

‘ಸುಲ್ತಾನ್’ ಸಲ್ಮಾನ್ ಖಾನ್ ದೊಡ್ಡ ಗೆಲುವಿನ ಸಂಭ್ರಮದಲ್ಲಿದ್ದಾನೆ. ವಿವಾದಗಳೇನೇ ಇದ್ದರೂ ನಟನಾಗಿ ಸಲ್ಲು ಮಾಡಿದ ಸಾಧನೆ ಸಣ್ಣದೇನಲ್ಲ. ಆದರೆ ನಟನಾಗದಿದ್ದರೆ ಸಲ್ಲು ಏನಾಗುತ್ತಿದ್ದ? ಬಹುಶಃ ಅಪ್ಪನ ಆಸೆಯಂತೆ ಬ್ಯಾಟು ಹಿಡಿದು ಕ್ರಿಕೆಟಿಗನಾಗಿರುತ್ತಿದ್ದ.

ಮಗ ಕ್ರಿಕೆಟ್ ಆಟಗಾರನಾಗಬೇಕು. ಭಾರತ ತಂಡಕ್ಕೆ ಆಡಬೇಕು ಎನ್ನುವುದು ಸಲೀಮ್ ಖಾನ್ ಅವರ ದೊಡ್ಡ ಆಸೆಯಾಗಿತ್ತಂತೆ. ಅದಕ್ಕಾಗಿ ಮಾಜಿ ಕ್ರಿಕೆಟಿಗ ಸಲೀಮ್ ದುರಾನಿ ಅವರ ಬಳಿ ಮಗನನ್ನು ತರಬೇತಿಗಾಗಿ ಸೇರಿಸಿದ್ದರು. ಸಲ್ಲುವಿನ ಸಾಮರ್ಥ್ಯ ಕಂಡ ದುರಾನಿ ಅವರು, ಆತನಿಗೆ ಮೈದಾನದಲ್ಲಿ ಬಹುದೊಡ್ಡ ಭವಿಷ್ಯವಿದೆ ಎಂದಿದ್ದರು. ಆದರೆ ಸಲ್ಲು ಲೆಕ್ಕಾಚಾರ ಬೇರೆಯೇ ಆಗಿತ್ತು. ಮುಖ್ಯವಾಗಿ ಬೆಳಿಗ್ಗೆ 5.30ಕ್ಕೆ ಎದ್ದು ಅಭ್ಯಾಸಕ್ಕೆ ತೆರಳುವುದು ಸಲ್ಲುವಿಗೆ ಇಷ್ಟವೇ ಇರಲಿಲ್ಲ. ಅಭ್ಯಾಸ ಮುಗಿಸಿಕೊಂಡು ಬಂದು ಶಾಲೆಗೆ ಹೋಗಲು ಸಿದ್ಧನಾಗುವುದು ಆತನಿಗೆ ಒತ್ತಡವೆನಿಸುತ್ತಿತ್ತು. ‘ಸಿನಿಮಾ ಬದುಕು ಕಷ್ಟಕರ ಎನಿಸುತ್ತಿದೆ. ಕ್ರಿಕೆಟ್ ಇನ್ನೂ ಕಷ್ಟಕರದ ಬದುಕಾಗಿರುತ್ತಿತ್ತು’ ಎಂದಿದ್ದಾನೆ ಸಲ್ಲು.

ಕ್ರಿಕೆಟ್‌ನಲ್ಲಿ ಮುಂದುವರಿಯಲು ಸಲ್ಲುಗೆ ಇಷ್ಟವಿರಲಿಲ್ಲ. ಮೊದಲ ದಿನ ಆಟವಾಡಿದಾಗ ಸಲ್ಲು ಚೆನ್ನಾಗಿಯೇ ಆಡಿದ್ದನಂತೆ. ಎರಡನೆಯ ದಿನ ಇನ್ನೂ ಚೆನ್ನಾಗಿಯೇ ಆಡಿದ್ದ. ಅದನ್ನು ಕಂಡ ಸಲೀಮ್ ದುರಾನಿ ಮೂರನೇ ದಿನದ ಆಟ ನೋಡಲು ಸಲೀಮ್ ಖಾನ್ ಅವರನ್ನು ಕರೆಸಿದರು. ತಂದೆಯೆದುರು ಸಲ್ಲು ಬೇಕೆಂದೇ ಕೆಟ್ಟದಾಗಿ ಆಡಿದನಂತೆ.

‘ಬೆಳಿಗ್ಗೆ ಶಾಲೆಗೆ ಹೋಗುವುದೇ ದೊಡ್ಡ ಸಮಸ್ಯೆಯಾಗಿತ್ತು. 9 ಗಂಟೆಗೆ ಶಾಲೆ ಶುರುವಾಗುತ್ತಿತ್ತು. 8.30ಕ್ಕೆ ಎದ್ದು, ಸಮಯಕ್ಕೆ ಸರಿಯಾಗಿ ಶಾಲೆ ತಲುಪುವುದನ್ನು ಹೇಗೋ ನಿಭಾಯಿಸುತ್ತಿದ್ದೆ. ಹೀಗಿರುವಾಗ 5.30ಕ್ಕೆ ಏಳುವುದು ಹೇಗೆ? ವಾಸ್ತವವಾಗಿ ನಾನು ನಿರ್ದೇಶಕನಾಗ ಬಯಸಿದ್ದೆ’ ಎಂದಿದ್ದಾನೆ ಸಲ್ಲು.

ಕೊನೆಗೆ ಸಲ್ಲು ತೋರಿದ ನಿರಾಸಕ್ತಿಯಿಂದ ತಂದೆಯೂ ಆತನನ್ನು ಒತ್ತಾಯ ಮಾಡಲು ಹೋಗಲಿಲ್ಲ. ಆ್ಯಕ್ಷನ್ ಕಟ್ ಹೇಳುವ ಸಲ್ಲು ಬಯಕೆಯೂ ಈಡೇರಲಿಲ್ಲ. ಸಲ್ಲುವಿನ ‘ಹಿಟ್ ಆ್ಯಂಡ್ ರನ್’ ಪ್ರಕರಣ ಬಾಲ್ಯದ ಕ್ರಿಕೆಟ್‌ನ ಸ್ಫೂರ್ತಿಯೇನಲ್ಲ ಬಿಡಿ.

# ಸೋನಾಕ್ಷಿ ‘ನ್ಯಾಯ’ದ ಮಾತು

ಸಿನಿಮಾ, ಫ್ಯಾಷನ್, ಲೈಫ್‌ಸ್ಟೈಲ್‌ಗಳ ಕುರಿತಷ್ಟೇ ಮಾತನ್ನಾಡುತ್ತಿದ್ದ ಬಿಟೌನ್‌ನ ತಾರಾಮಣಿಯರು ಬದಲಾಗುತ್ತಿದ್ದಾರೆ. ಗಹನವಾದ ಸಾಮಾಜಿಕ ಸಂಗತಿಗಳ ಕುರಿತು ದನಿ ಎತ್ತುವ ಮೂಲಕ ಬಣ್ಣದ ಚೌಕಟ್ಟಿನಾಚೆಗೂ ಗುರುತಿಸಿಕೊಳ್ಳುತ್ತಿದ್ದಾರೆ. ಸಮಾಜದಲ್ಲಿನ ಮಹಿಳೆಯರ ಸ್ಥಾನಮಾನದ ಕುರಿತು ಗಟ್ಟಿಯಾಗಿ ಮಾತನಾಡಬಲ್ಲ ತಾರೆಯರಲ್ಲಿ ಸೋನಾಕ್ಷಿ ಸಿನ್ಹಾ ಕೂಡ ಒಬ್ಬಳು. ಆಕೆಯ ಮೇಲೆ ಅಪ್ಪ ಶತ್ರುಘ್ನ ಸಿನ್ಹಾರ ಪ್ರಭಾವವೂ ಇರಬಹುದು.

ತಮ್ಮ ಮೇಲಾಗುತ್ತಿರುವ ಅನ್ಯಾಯಗಳನ್ನು ಮಹಿಳೆಯರು ದೀರ್ಘಕಾಲದಿಂದ ಸಹಿಸಿಕೊಳ್ಳುತ್ತಲೇ ಬಂದಿದ್ದಾರೆ. ಅವುಗಳ ವಿರುದ್ಧ ದನಿ ಎತ್ತಲು ಇದು ಸೂಕ್ತ ಸಮಯ ಎನ್ನುವುದು ಸೋನಾಕ್ಷಿ ಅಭಿಪ್ರಾಯ.

‘ಅನ್ಯಾಯಗಳ ವಿರುದ್ಧ ನಾವು ಮೌನವಾಗಿದ್ದುಕೊಂಡೇ ಬರುತ್ತಿದ್ದೇವೆ. ಕಚೇರಿಗಳಲ್ಲಾಗಲಿ, ಸಾರ್ವಜನಿಕ ಸಾರಿಗೆಗಳಲ್ಲಾಗಲೀ ಮಹಿಳೆಯರ ವಿರುದ್ಧ ನಡೆಯುತ್ತಿರುವ ದೌರ್ಜನ್ಯ ಮತ್ತು ಅನ್ಯಾಯಗಳನ್ನು ನಾವು ಕಡೆಗಣಿಸುತ್ತಿದ್ದೇವೆ. ಅವುಗಳ ವಿರುದ್ಧ ನಾವು ಇಂದಾದರೂ ದನಿ ಎತ್ತದಿದ್ದರೆ, ಮತ್ತೆಂದೂ ಮಾತನಾಡ ಸಾಧ್ಯವಿಲ್ಲ. ನೀವು ಭಾವಿಸಿರುವುದಕ್ಕಿಂತಲೂ ಹೆಚ್ಚು ಶಕ್ತಿಶಾಲಿಯಾಗಿದ್ದೀರಿ. ಮಾತನಾಡಲು ಇದೇ ಸರಿಯಾದ ಸಮಯ’ ಎಂದು ಅನ್ಯಾಯಕ್ಕೊಳಗಾದ ಮಹಿ
ಮಾತ
ಅನ್ಯಾ
ಪ್ರತಿಭ
ಅಭಿವ

ಎ.
ನಿರ್ದೇ
ಸೋನ
ಹುಡ
ಕಾಣಿ
ಸೆಪ್ಟೆಂ
ತೆರೆಗೆ
ಸಿದ್ಧವ

